# ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ,

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560 018

**ಬಿ.ಎ. ಸಂಸ್ಕೃತ/ವೇದ – ಶಾಸ್ತ್ರೀ** ಸ್ನಾತಕ

ಹಾಗೂ

**ಎಂ.ಎ. ಸಂಸ್ಕೃತ/ವೇದ – ಆಚಾರ್ಯ** ಸ್ನಾತಕೋತ್ತರ

ಪದವಿಗಳಿಗೆ ಸಂಬಂಧಿಸಿದ

# ನಿಯಮಾವಳಿ

**(2016–17ರಿಂದ)**

1. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಘಟಕ ಹಾಗೂ ಸಂಬಂಧಿಸಿದ ಕಾಲೇಜುಗಳಲ್ಲಿ ಈ ಕೆಳಕಂಡ ವಿಷಯಗಳಲ್ಲಿ ಸ್ನಾತಕ–ಸ್ನಾತಕೋತ್ತರ ಅಧ್ಯಯನ ವ್ಯವಸ್ಥೆಯಿರುತ್ತದೆ.

**ಸಂಸ್ಕೃತ ಭಾಗ**

1. ಸಂಸ್ಕೃತ ಸಾಹಿತ್ಯ
2. ಅಲಂಕಾರ ಶಾಸ್ತ್ರ
3. ವ್ಯಾಕರಣ ಶಾಸ್ತ್ರ
4. ಧರ್ಮಶಾಸ್ತ್ರ
5. ನ್ಯಾಯ ಶಾಸ್ತ್ರ
6. ಪೂರ್ವಮೀಮಾಂಸಾ
7. ಅದ್ವೈತವೇದಾಂತ
8. ದ್ವೈತವೇದಾಂತ
9. ವಿಶಿಷ್ಟಾದ್ವೈತವೇದಾಂತ
10. ಶಕ್ತಿವಿಶಿಷ್ಟಾದ್ವೈತವೇದಾಂತ
11. ಜೈನ ಸಿದ್ಧಾಂತ
12. ಜ್ಯೋತಿಷ್ಯ

**ವೇದ ಭಾಗ**

1. ಋಗ್ವೇದ – ಘನಾಂತ
2. ಋಗ್ವೇದ – ಶ್ರೌತ
3. ಋಗ್ವೇದ – ಸ್ಮಾರ್ತ
4. ಶುಕ್ಲ ಯಜುರ್ವೇದ – ಘನಾಂತ
5. ಶುಕ್ಲ ಯಜುರ್ವೇದ – ಶ್ರೌತ
6. ಶುಕ್ಲ ಯಜುರ್ವೇದ – ಸ್ಮಾರ್ತ
7. ಕೃಷ್ಣ ಯಜುರ್ವೇದ – ಘನಾಂತ
8. ಕೃಷ್ಣ ಯಜುರ್ವೇದ – ಶ್ರೌತ
9. ಕೃಷ್ಣ ಯಜುರ್ವೇದ – ಸ್ಮಾರ್ತ
10. ಅಥರ್ವವೇದ– ಘನಾಂತ
11. ಸಾಮವೇದ – ಶ್ರೌತ
12. ಸಾಮವೇದ – ಸ್ಮಾರ್ತ
13. ಸಾಮವೇದ – ಲಕ್ಷಣ

**14.** ಸಾಮವೇದ ತಾಂಡ್ಯ ಮಹಾಬ್ರಾಹ್ಮಣ
**15.** ಸಾಮವೇದಭಾಷ್ಯ
**16.** ವೀರಶೈವವೇದ

ವಿ.ಸೂ : ಸ್ನಾತಕೋತ್ತರ ಪದವಿಯಲ್ಲಿ ಎಲ್ಲ ವೇದಗಳ ಶ್ರೌತ ಸ್ಮಾರ್ತ ವಿಷಯಗಳು, ಸಾಮವೇದದ ಲಕ್ಷಣ ಹಾಗೂ ತಾಂಡ್ಯಮಹಾಬ್ರಾಹ್ಮಣಗಳು ಇರುತ್ತವೆ.

2. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮುಖ್ಯ ಕಾರ್ಯಾಲಯದಲ್ಲಿ ಕೇವಲ ಎಂ.ಫಿಲ್ ಹಾಗೂ ಪಿಎಚ್.ಡಿಯ ಅಧ್ಯಯನಕ್ಕೆ ಅವಕಾಶವಿರುತ್ತದೆ ಹಾಗೂ ಈ ಸಂಬಂಧ ಇತರ ವಿವರಗಳನ್ನು ಪ್ರತ್ಯೇಕವಾಗಿ ಮುದ್ರಿಸಲಾಗಿದೆ.
**3.** ಬೆಂಗಳೂರಿನ ಮುಖ್ಯ ಕೇಂದ್ರದಲ್ಲಿ ಸಂಸ್ಕೃತ ಬಿ.ಎ ಹಾಗೂ ಎಂ.ಎ ತರಗತಿಗಳು ನಡೆಯುತ್ತವೆ. ಅದರಲ್ಲಿ ಬಿ.ಎ ತರಗತಿಗಳಲ್ಲಿ ಪ್ರವೇಶಕ್ಕೆ ಪಿ.ಯು.ಸಿ ಅಥವಾ ತತ್ಸಮಾನ ಪರೀಕ್ಷೆಗಳಲ್ಲಿ ಸಂಸ್ಕೃತ ಸಹಿತ/ಸಂಸ್ಕೃತ ರಹಿತ ಉತ್ತೀರ್ಣರಾದವರಿಗೆ ಹಾಗೂ ಯಾವುದೇ ವಿಶ್ವವಿದ್ಯಾಲಯದ ಸಂಸ್ಕೃತ ಡಿಪ್ಲೊಮೊ ಉತ್ತೀರ್ಣರಾದ ಎಲ್ಲರಿಗೂ ಮುಕ್ತ ಪ್ರವೇಶವಿರುತ್ತದೆ. ವಿವರಗಳನ್ನು ನಿರ್ದೇಶಕರು, ಅಧ್ಯಯನಾಂಗ ಇವರ ಬಳಿ ಅಥವಾ ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಪಡೆಯಬಹುದಾಗಿದೆ.

**ಪ್ರಸ್ತಾವನೆ:–**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ (ಶಾಸ್ತ್ರೀ ಹಾಗೂ ಆಚಾರ್ಯ) ಸ್ನಾತಕ–ಸ್ನಾತಕೋತ್ತರ ಅಧ್ಯಯನ ವ್ಯವಸ್ಥೆಯಲ್ಲಿ ಜಾರಿಗೆ ಬಂದಿರುವ ಹೊಸ ಪಾಠ್ಯಕ್ರಮಕ್ಕೆ ಅನುಗುಣವಾಗಿ ಪ್ರವೇಶ – ಅಧ್ಯಯನ – ಪರೀಕ್ಷೆಗಳಿಗೆ ಸಂಬಂಧಿಸಿದ ನಿಯಮಾವಳಿಗಳನ್ನು ರೂಪಿಸಲಾಗಿದೆ. ಈ ನಿಯಮಗಳು ಮುಂದಿನ ಆದೇಶದವರೆಗೂ ಜಾರಿಯಲ್ಲಿರುತ್ತವೆ. ಕಾಲಕಾಲಕ್ಕೆ ಮಾನ್ಯ ಕುಲಪತಿಗಳು ಈ ನಿಯಮಗಳನ್ನು ಸಡಿಲಿಸುವ, ಪರಿಷ್ಕರಿಸುವ, ವಿವಾದಗಳನ್ನು ಬಗೆಹರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

## ಪ್ರವೇಶ ನಿಯಮ
## ಶಾಸ್ತ್ರಭಾಗ
## ಬಿ.ಎ. (ಸಂಸ್ಕೃತ) ಶಾಸ್ತ್ರೀ

**ಪಾಠ್ಯಕ್ರಮದ ಅವಧಿ –** 3 ವರ್ಷಗಳು

**ಪ್ರವೇಶಾರ್ಹತೆ**

ಸಂಸ್ಕೃತ 'ಸಾಹಿತ್ಯ' ಪರೀಕ್ಷೆಯ ಎಲ್ಲ ಭಾಗಗಳಲ್ಲಿ ಉತ್ತೀರ್ಣತೆ
**ಅಥವಾ**
ಪ್ರಾಕ್ಶಾಸ್ತ್ರಿ / ಪ್ರಾಕ್ಶಿರೋಮಣಿ / ಉತ್ತರಮಧ್ಯಮಾ / ಮಧ್ಯಮಾ / ಉಪಶಾಸ್ತ್ರಿ ಅಥವಾ ತತ್ಸಮಾನವಾದ ಅಧಿಕೃತ ಪರೀಕ್ಷಾಮಂಡಲಿ ನಡೆಸಿದ ಪರೀಕ್ಷೆಯಲ್ಲಿ ಉತ್ತೀರ್ಣತೆ
**ಅಥವಾ**
ಪಿಯುಸಿ (ಇಂಟರ್‌ಮೀಡಿಯೇಟ್/12ನೇ ತರಗತಿ) ಪರೀಕ್ಷೆಯಲ್ಲಿ ಸಂಸ್ಕೃತಭಾಷೆಯೊಂದಿಗೆ ಉತ್ತೀರ್ಣತೆ
**ಅಥವಾ**
ಪಿಯುಸಿ (ಇಂಟರ್‌ಮೀಡಿಯೇಟ್/12ನೇ ತರಗತಿ) ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು, ಯಾವುದೇ ವಿಶ್ವವಿದ್ಯಾಲಯದ ಸಂಸ್ಕೃತ ಡಿಪ್ಲೊಮಾ / ಸಂಸ್ಕೃತ ಕೋವಿದ / ಸಂಸ್ಕೃತ ದ್ವಿತೀಯದೀಕ್ಷಾ / ಸಂಸ್ಕೃತ ವಿಚಕ್ಷಣ / ಆಗಮಪ್ರವೀಣ – ಈ ಪರೀಕ್ಷೆಗಳಲ್ಲಿ ಉತ್ತೀರ್ಣತೆ
**ಅಥವಾ**
ಯಾವುದೇ ವಿಶ್ವವಿದ್ಯಾಲಯದ ಬಿಎ ಪರೀಕ್ಷೆಯಲ್ಲಿ ಸಂಸ್ಕೃತಭಾಷೆಯೊಂದಿಗೆ ಉತ್ತೀರ್ಣತೆ.
**ಅಥವಾ**
ಯಾವುದೇ ವಿಶ್ವವಿದ್ಯಾಲಯದ ಎಂಎ ಪರೀಕ್ಷೆಯಲ್ಲಿ ಸಂಸ್ಕೃತಭಾಷೆಯೊಡನೆ ಉತ್ತೀರ್ಣತೆ
**ಅಥವಾ**
ಬಿಎ ಇಂಟಿಗ್ರೇಟೆಡ್ ಕನ್ನಡ ಪಂಡಿತ ಪದವಿಯಲ್ಲಿ ಉತ್ತೀರ್ಣತೆ
**ಅಥವಾ**
ಪಿಯುಸಿ (ಇಂಟರ್‌ಮೀಡಿಯೇಟ್/12ನೇ ತರಗತಿ) ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು ಆಯಾ ಕಾಲೇಜುಗಳಲ್ಲಿ ನಡೆಸುವ ಪ್ರವೇಶಪರೀಕ್ಷೆಯಲ್ಲಿ ಉತ್ತೀರ್ಣತೆ.

ಸೂಚನೆ : ಪರೀಕ್ಷೆಯನ್ನು ಬರೆಯಲು ತರಗತಿಗಳಲ್ಲಿ 75% ಹಾಜರಾತಿ ಅನಿವಾರ್ಯ.

## ಎಂ.ಎ.(ಸಂಸ್ಕೃತ) ಆಚಾರ್ಯ

**ಪಾಠ್ಯಕ್ರಮದ ಅವಧಿ –** 2 ವರ್ಷಗಳು (ನಾಲ್ಕು ಸೆಮಿಸ್ಟರ್‌ಗಳು)

**ಪ್ರವೇಶಾರ್ಹತೆ**

1. ಸಂಬಂಧಿಸಿದ ಶಾಸ್ತ್ರ/ವೇದಭಾಗದಲ್ಲಿ, **ಬಿ.ಎ. ಸಂಸ್ಕೃತ ಶಾಸ್ತ್ರೀ (ಹಿಂದಿನ ವಿದ್ವನ್ಮಧ್ಯಮಾ)** ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣತೆ.

2. ಬಿ. ಎ. (ಸಂಸ್ಕೃತ – ಒಂದು ಭಾಷೆಯಾಗಿ)/ ಎಂ.ಎ. ಸಂಸ್ಕೃತ ಉತ್ತೀರ್ಣತೆ ಇದ್ದಲ್ಲಿ ಅಥವಾ ಬೇರೆ ಶಾಸ್ತ್ರಭಾಗದಲ್ಲಿ ವಿದ್ವನ್ಮಧ್ಯಮಾ / ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣತೆ ಪಡೆದಿದ್ದಲ್ಲಿ ಪ್ರವೇಶ ಪರೀಕ್ಷೆಯ ಮೂಲಕ ಯಾವುದೇ ಶಾಸ್ತ್ರದಲ್ಲಿ ಪ್ರವೇಶ ನೀಡಬಹುದು.

3. ಯಾವುದೇ ಒಂದು ಶಾಸ್ತ್ರದಲ್ಲಿ ಆಚಾರ್ಯ ಅಥವಾ ತತ್ಸಮಾನ ಶಾಸ್ತ್ರೀಯ ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದಲ್ಲಿ ಪ್ರವೇಶ ಪರೀಕ್ಷೆಯ ಮೂಲಕ ಇನ್ನೊಂದು ಶಾಸ್ತ್ರದ ಆಚಾರ್ಯ ಮೊದಲ ವರ್ಷದಲ್ಲಿ ಪ್ರವೇಶ ಪಡೆಯಬಹುದು.

4. ಪ್ರವೇಶ ಶುಲ್ಕವನ್ನು ಹಾಗೂ ನೋಂದಣಿ ಶುಲ್ಕವನ್ನು ಕಾಲಕಾಲಕ್ಕೆ ವಿಶ್ವವಿದ್ಯಾಲಯವೇ ನಿಗದಿಗೊಳಿಸುತ್ತದೆ.

**ಸೂಚನೆ:–**

(ಖಾಸಗಿ ವಿದ್ಯಾರ್ಥಿಗಳಿಗೂ ಇವೇ ಪ್ರವೇಶನಿಯಮಗಳು ಅನ್ವಯಿಸುತ್ತವೆ. ಅವರು ವಿಶ್ವವಿದ್ಯಾಲಯಕ್ಕೆ ನೇರವಾಗಿ ಪರೀಕ್ಷೆಗಾಗಿ ಆವೇದನಪತ್ರವನ್ನು ಸಲ್ಲಿಸಬೇಕು. ಪ್ರವೇಶ ಪರೀಕ್ಷೆಯನ್ನು ನಡೆಸಿ ಉತ್ತೀರ್ಣರಾದಲ್ಲಿ ಪ್ರಧಾನ ಪರೀಕ್ಷೆಯನ್ನು ಬರೆಯಲು ಅವಕಾಶ ಕಲ್ಪಿಸಲಾಗುವುದು. ಯಾವುದೇ ಕಾಲೇಜಿನ ಮೂಲಕ ಖಾಸಗಿ ಅಭ್ಯರ್ಥಿಗಳ ಆವೇದನವನ್ನು ಸ್ವೀಕರಿಸುವುದಿಲ್ಲ. ಈ ಸಂಬಂಧ ಪ್ರತ್ಯೇಕವಾದ ಅಧಿಸೂಚನೆಯನ್ನು ವಿಶ್ವವಿದ್ಯಾಲಯವು ಪರೀಕ್ಷೆಗೆ 3 ತಿಂಗಳ ಅವಧಿಯ ಮೊದಲು ಹೊರಡಿಸುತ್ತದೆ.)

## ವೇದ ವಿಭಾಗದ ಪದವಿಗಳಲ್ಲಿ ಪ್ರವೇಶಾರ್ಹತೆ

### ಬಿ.ಎ. (ವೇದ) ಶಾಸ್ತ್ರೀ

1. ವೇದ ಮೂಲ ಪರೀಕ್ಷೆಯಲ್ಲಿ ಉತ್ತೀರ್ಣತೆ
2. ಪಿ.ಯು.ಸಿ.ಯಲ್ಲಿ ಸಂಸ್ಕೃತ ಭಾಷೆಯನ್ನು ಐಚ್ಛಿಕವಾಗಿ ಓದಿ ವೇದಮೂಲದ ಜ್ಞಾನವನ್ನು ಹೊಂದಿರಬೇಕು ಮತ್ತು ಈ ಸಂಬಂಧ ವೇದ ಪಾಠಶಾಲೆಯ ಅಥವಾ ಸಾಂಪ್ರದಾಯಿಕ ವೇದ ಪಂಡಿತರಿಂದ ಪಡೆದ ಪ್ರಮಾಣ ಪತ್ರವನ್ನು ಹೊಂದಿರಬೇಕು.
3. ಸಂಸ್ಕೃತ ಸಾಹಿತ್ಯ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ವೇದ ಮೂಲದ ಜ್ಞಾನವನ್ನು ಹೊಂದಿರಬೇಕು ಮತ್ತು ಈ ಸಂಬಂಧ ವೇದ ಪಾಠಶಾಲೆಯ ಅಥವಾ ಸಾಂಪ್ರದಾಯಿಕ ವೇದ ಪಂಡಿತರಿಂದ ಪಡೆದ ಪ್ರಮಾಣ ಪತ್ರವನ್ನು ಹೊಂದಿರಬೇಕು.
4. ರಾಷ್ಟ್ರೀಯ ಸ್ತರದ ಮಾನ್ಯತೆಯನ್ನು ಪಡೆದ ವೇದ ಶಾಲೆಯಲ್ಲಿ ಸಂಸ್ಕೃತ ಭಾಷೆಯಲ್ಲಿ ವೇದ ಮೂಲ ಪರೀಕ್ಷೆ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

## ಎಂ.ಎ. (ವೇದ) ಆಚಾರ್ಯ

1. ವೇದ ಶಾಸ್ತ್ರೀ (ಹಿಂದಿನ ವಿದ್ವನ್ಮಧ್ಯಮಾ) ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

**ಅಥವಾ**

ಸಂಸ್ಕೃತ ಭಾಷೆಯೊಂದಿಗೆ ಸಂಬಂಧಿತ ವೇದ ಶಾಸ್ತ್ರೀ (ವಿದ್ವನ್ಮಧ್ಯಮಾ) ಪರೀಕ್ಷೆಗೆ ಸಮಾನವಾದ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

2. ಯಾವುದೇ ಶಾಸ್ತ್ರದಲ್ಲಿ / ಸಂಸ್ಕೃತದಲ್ಲಿ ಸ್ನಾತಕ(ಬಿ.ಎ) / ಸಂಸ್ಕೃತ ಸ್ನಾತಕೋತ್ತರ(ಎಂ.ಎ) ಪದವಿಯಲ್ಲಿ ಉತ್ತೀರ್ಣರಾಗಿರಬೇಕು. ಮತ್ತು ವೇದ ಕ್ರಮಾಂತ ಅಧ್ಯಯನವನ್ನು ಮಾಡಿದ ಪ್ರಮಾಣ ಪತ್ರವನ್ನು ಯಾವುದೇ ರಾಷ್ಟ್ರಸ್ತರದ ವೇದ ಪಾಠಶಾಲೆಯಿಂದ ಪಡೆದಿರಬೇಕು.

**ಸೂಚನೆ:–**

ಯಾವುದೇ ವೇದವಿಭಾಗದಲ್ಲಿ ಪ್ರವೇಶ ಮಾಡುವಾಗ ಆ ವೇದದಲ್ಲಿಯೇ ಅರ್ಹತಾ ಪ್ರಮಾಣಪತ್ರವನ್ನು ಹೊಂದಿರಬೇಕು.

### ಪರೀಕ್ಷೆಗಳ ಸಾಮಾನ್ಯ ನಿಯಮಗಳು

1) **ಆಂತರಿಕ ಪರೀಕ್ಷೆ:–**

1. ಕೇವಲ ಎಂ.ಎ (ಸಂಸ್ಕೃತ/ವೇದ) ಆಚಾರ್ಯ ಪರೀಕ್ಷೆಗಳಲ್ಲಿ 30 ಅಂಕಗಳ ಆಂತರಿಕ ಪರೀಕ್ಷೆ ಇರುತ್ತದೆ. ಇದರಲ್ಲಿ ಕಾಲೇಜುಸ್ತರದಲ್ಲಿ ನಡೆಸುವ ಆಯಾ ವಿಷಯಗಳಿಗೆ ಸಂಬಂಧಿಸಿದ 2 ವಿಚಾರಗೋಷ್ಠಿ (ಸೆಮಿನಾರ್)ಗಳಿಗೆ 10 ಅಂಕಗಳು (2*5=10), 500 ಪದಗಳಿಂದ ಕೂಡಿದ ಆಯಾ ವಿಷಯಕ್ಕೆ ಸಂಬಂಧಿಸಿದ ಎರಡು ಪ್ರಬಂಧ ಮಂಡನೆಗೆ 10 (5*2=10), ಹಾಗೂ 2 ಲಘು ಪರೀಕ್ಷೆಗಳಿಗೆ 10 (2*5=10) ಅಂಕಗಳು ಆಗಿರುತ್ತದೆ.
2. ಈ ಆಂತರಿಕ ಪರೀಕ್ಷೆಗಳನ್ನು ನಡೆಸಿ ಸಂಬಂಧಿಸಿದ ಶಾಸ್ತ್ರಭಾಗದ ಅಧ್ಯಾಪಕರು ಪ್ರಾಚಾರ್ಯರ ಮೂಲಕ ವಿದ್ಯಾರ್ಥಿಯ ಹೆಸರು ಮತ್ತು ನೋಂದಣಿ ಸಂಖ್ಯೆಯ ಜೊತೆಗೆ ಅಂಕಗಳನ್ನು ನಮೂದಿಸಿ ಪದವಿ ಪರೀಕ್ಷೆಗಳ ಕೊನೆಯ ದಿನದೊಳಗಾಗಿ ವಿಶ್ವವಿದ್ಯಾಲಯ ಪರೀಕ್ಷಾ ವಿಭಾಗಕ್ಕೆ ಕಳುಹಿಸುವುದು.
3. ಅಸ್ಪಷ್ಟವಾದ ಅಂಕ ಪ್ರಮಾಣ ಪತ್ರಗಳು ಮತ್ತು ನಿಗದಿತ ದಿನಾಂಕದೊಳಗೆ ತಲುಪದ ಪ್ರಪತ್ರಗಳನ್ನು ತಿರಸ್ಕರಿಸಲಾಗುವುದು. ಈ ವಿಷಯದಲ್ಲಿ ಸಂಬಂಧಿಸಿದ ಕಾಲೇಜಿನ ಪ್ರಾಚಾರ್ಯರು ಜವಾಬ್ದಾರರಾಗಿರುತ್ತಾರೆ.
4. ಖಾಸಗಿ ಪರೀಕ್ಷೆ ಬರೆಯುವವರು ನೇರವಾಗಿ ವಿಶ್ವವಿದ್ಯಾಲಯಕ್ಕೆ ತಮ್ಮ ಹೆಸರು ಮತ್ತು ನೋಂದಣಿ ಪತ್ರ ಸಂಖ್ಯೆ ನಮೂದಿಸುವುದರೊಂದಿಗೆ ಪ್ರತಿ ಸೆಮಿಸ್ಟರ್‌ನಲ್ಲಿಯೂ ಆಯಾ ವಿಷಯದಲ್ಲಿ 10–12 ಪುಟಗಳ 2 ಪ್ರಬಂಧಗಳನ್ನು ಸಿದ್ಧಪಡಿಸಿ ನೇರವಾಗಿ ವಿಶ್ವವಿದ್ಯಾಲಯ ಪರೀಕ್ಷಾ ಮುಖ್ಯಸ್ಥರಿಗೆ ಸಲ್ಲಿಸುವುದು. ವಿಳಂಬವಾದಲ್ಲಿ ಈ ಅಂಕಗಳನ್ನು ಪರಿಗಣಿಸಲಾಗುವುದಿಲ್ಲ. ಈ ಅಂಕಗಳನ್ನು ಪ್ರತ್ಯೇಕವಾಗಿ ಅಂಕಪಟ್ಟಿಗಳಲ್ಲಿ ನಮೂದಿಸಲಾಗುವುದಿಲ್ಲ.

2) **ಷಾಣ್ಮಾಸಿಕ ಪರೀಕ್ಷೆ**

**ಪರೀಕ್ಷೆ ಬರೆಯಲು 75% ಪ್ರತಿಶತ ಹಾಜರಾತಿ ಅನಿವಾರ್ಯ**

1. ಬಿ.ಎ ಪರೀಕ್ಷೆಯಲ್ಲಿ 100 ಅಂಕಗಳಿಗೆ ಪರೀಕ್ಷೆ ನಡೆಸಲಾಗುತ್ತದೆ. ಪ್ರತಿ ಪರೀಕ್ಷೆಯಲ್ಲಿ ಕನಿಷ್ಠ 35 ಅಂಕಗಳು ಉತ್ತೀರ್ಣತೆಯ ಮಾನದಂಡವಾಗಿರುತ್ತದೆ.

   35 ರಿಂದ 50 – ಉತ್ತೀರ್ಣ

   50 ರಿಂದ 59 – ದ್ವಿತೀಯ ಶ್ರೇಣಿ

   60 ರಿಂದ 74 – ಪ್ರಥಮ ಶ್ರೇಣಿ

   75 ರಿಂದ ಮೇಲ್ಪಟ್ಟು 100ರವರೆಗೆ – ವೈಶಿಷ್ಟ್ಯ ಶ್ರೇಣಿ

2. ಈ ಶಾಸ್ತ್ರೀ ಪರೀಕ್ಷೆಗಳಲ್ಲಿ ಅನುತ್ತೀರ್ಣವಾದ ಪತ್ರಿಕೆಗಳನ್ನು ಉಳಿಕೆ ವಿಷಯ ಮುಂದುವರೆಸುವ ಪದ್ಧತಿಯಲ್ಲಿ ಮುಂದಿನ ವರ್ಷಗಳಲ್ಲಿ ಪರೀಕ್ಷೆ ಬರೆಯುವ ಅವಕಾಶವಿರುತ್ತದೆ. ಅಂತೆಯೇ ಮುಂದಿನ ವರ್ಷದ ವ್ಯಾಸಂಗವನ್ನು ಮುಂದುವರೆಸಬಹುದಾಗಿರುತ್ತದೆ.
3. ಒಟ್ಟಾರೆ ಶಾಸ್ತ್ರೀ ವ್ಯಾಸಂಗಾವಧಿ 6 ವರ್ಷಕ್ಕೆ ಸೀಮಿತವಾಗಿರುತ್ತದೆ. ಈ ಅವಧಿಯಲ್ಲಿ ವಿದ್ಯಾರ್ಥಿ ಎಲ್ಲ ಪತ್ರಿಕೆಗಳಲ್ಲಿ ಉತ್ತೀರ್ಣನಾಗಿರಬೇಕು. ಆಚಾರ್ಯ ತರಗತಿಗಳಿಗೆ ಒಟ್ಟು ವ್ಯಾಸಂಗಾವಧಿ 4 ವರ್ಷಕ್ಕೆ ಸೀಮಿತವಾಗಿರುತ್ತದೆ.
4. ಯಾವುದೇ ವರ್ಷದಲ್ಲಿ ಒಂದು ಪತ್ರಿಕೆಯಲ್ಲಿ ಅನುತ್ತೀರ್ಣರಾದರೆ ಅಂತಹವರನ್ನು ಶ್ರೇಣಿ ಪ್ರದಾನಕ್ಕೆ ಪರಿಗಣಿಸುವುದಿಲ್ಲ.
5. ಶಾಸ್ತ್ರೀ ಮೊದಲನೆಯ ವರ್ಷದ ಪರೀಕ್ಷೆಗೆ ಖಾಸಗಿಯಾಗಿ ಕುಳಿತುಕೊಳ್ಳುವ ಅಭ್ಯರ್ಥಿಗಳ ವಯಸ್ಸು ದಿನಾಂಕ 01.03.2017ರಂದು ಕನಿಷ್ಠ 17 ವರ್ಷ ಪೂರ್ಣಗೊಂಡಿರಬೇಕು. ಖಾಸಗಿಯಾಗಿ ಪರೀಕ್ಷೆಗೆ ಕುಳಿತುಕೊಳ್ಳುವವರು ಕ್ರಮವಾಗಿ 3 ವರ್ಷಗಳಲ್ಲಿಯೂ ಪರೀಕ್ಷೆಯನ್ನು ಬರೆಯಬೇಕು.
6. ಆಚಾರ್ಯ ಮೊದಲನೆಯ ವರ್ಷದ ಪರೀಕ್ಷೆಗೆ ಖಾಸಗಿಯಾಗಿ ಕುಳಿತುಕೊಳ್ಳುವ ಅಭ್ಯರ್ಥಿಗಳ ವಯಸ್ಸು ದಿನಾಂಕ 01.03.2017ರಂದು ಕನಿಷ್ಠ 20 ವರ್ಷ ಪೂರ್ಣಗೊಂಡಿರಬೇಕು. ಖಾಸಗಿಯಾಗಿ ಪರೀಕ್ಷೆಗೆ ಕುಳಿತುಕೊಳ್ಳುವವರು ಕ್ರಮವಾಗಿ ನಾಲ್ಕು ಸೆಮಿಸ್ಟರ್‌ಗಳಲ್ಲಿಯೂ ವರ್ಷಗಳಲ್ಲಿಯೂ ಪರೀಕ್ಷೆಯನ್ನು ಬರೆಯಬೇಕು.
7. ಪಠ್ಯ ಬದಲಾವಣೆಯಲ್ಲಿ ಹೊಸ ಪಠ್ಯಕ್ಕನುಗುಣವಾಗಿ ಆಯಾ ಪತ್ರಿಕೆಯ ಪರೀಕ್ಷೆಯನ್ನು ಬರೆಯಬೇಕು.
8. ಖಾಸಗಿಯಾಗಿ ಪರೀಕ್ಷೆಗೆ ಕುಳಿತುಕೊಳ್ಳುವವರು ನೇರವಾಗಿ ವಿಶ್ವವಿದ್ಯಾಲಯಕ್ಕೆ ಅರ್ಜಿ ಸಲ್ಲಿಸಬೇಕು. ಯಾವುದೇ ಕಾಲೇಜಿನಲ್ಲಿ ಪರೀಕ್ಷೆಗಳನ್ನು ಕಟ್ಟಿದಲ್ಲಿ ಪ್ರಾಂಶುಪಾಲರನ್ನೇ ಹೊಣೆಗಾರರನ್ನಾಗಿ ಮಾಡುವುದು.
9. ಖಾಸಗಿಯಾಗಿ ಪರೀಕ್ಷೆ ತೆಗೆದುಕೊಳ್ಳುವ ಅಭ್ಯರ್ಥಿಗಳು ಯಾವುದೇ ಸಂಸ್ಕೃತ ಕಾಲೇಜುಗಳಲ್ಲಿ ಬೇರೆ ವಿಭಾಗಕ್ಕೆ ಆ ಸಾಲಿನಲ್ಲಿ ಅಧಿಕೃತ ಕಾಲೇಜು ವಿದ್ಯಾರ್ಥಿ ಆಗಿರಬಾರದು.
10. ಆಚಾರ್ಯ ಪರೀಕ್ಷೆಯಲ್ಲಿ ಪ್ರತಿಪತ್ರಿಕೆಯಲ್ಲಿ ಕನಿಷ್ಠ 40 ಅಂಕಗಳನ್ನು ಪಡೆದವರು ಮಾತ್ರ ಉತ್ತೀರ್ಣತೆಯನ್ನು ಹೊಂದುತ್ತಾರೆ.
    40 ರಿಂದ 50 – ಉತ್ತೀರ್ಣ
    50 ರಿಂದ 59 – ದ್ವಿತೀಯ ಶ್ರೇಣಿ
    60 ರಿಂದ 74 – ಪ್ರಥಮ ಶ್ರೇಣಿ
    75 ರಿಂದ ಮೇಲ್ಪಟ್ಟು 100ರವರೆಗೆ – ವೈಶಿಷ್ಟ್ಯಶ್ರೇಣಿ
11. ಆಚಾರ್ಯ ಪರೀಕ್ಷೆಯಲ್ಲಿ ತಜ್ಞರಿಂದ ಎರಡು ಬಾರಿ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಿಸಲಾಗುತ್ತದೆ. ಎರಡು ಮೌಲ್ಯಮಾಪನಗಳ ಸರಾಸರಿ ಅಂಕಗಳನ್ನು ಪರಿಗಣಿಸಲಾಗುತ್ತದೆ. ಹಾಗೂ 70 ಅಂಕಗಳು ಬಾಹ್ಯಪರೀಕ್ಷೆಗೆ ಹಾಗೂ 30 ಅಂಕಗಳನ್ನು ಆಂತರಿಕ ಪರೀಕ್ಷೆಗೆ ಇರುತ್ತವೆ.
12. ಆಂತರಿಕ ಪರೀಕ್ಷೆಗಳ ಅಂಕಗಳು ನಿಗದಿತ ಸಮಯಕ್ಕೆ ತಲುಪದೇ ಹೋದಲ್ಲಿ ಅವುಗಳನ್ನು ಪರಿಗಣಿಸಲಾಗುವುದಿಲ್ಲ. ಈ ವಿಷಯದಲ್ಲಿ ಪ್ರಾಂಶುಪಾಲರೇ ಹೊಣೆಗಾರರು.
13. ಆಂತರಿಕ ಹಾಗೂ ಸೆಮಿಸ್ಟರ್ ಪರೀಕ್ಷೆಗಳ ಅಂಕಗಳನ್ನು ಒಟ್ಟು ಸೇರಿಸಿ ಅಂಕಪಟ್ಟಿಯಲ್ಲಿ ನಮೂದಿಸಲಾಗುತ್ತದೆ. ಪ್ರತ್ಯೇಕವಾಗಿ ಉಲ್ಲೇಖಿಸುವುದಿಲ್ಲ. ಆದರೆ ಸೆಮಿಸ್ಟರ್ ಪರೀಕ್ಷೆಯಲ್ಲಿ ಕನಿಷ್ಠ ಅಂಕಗಳನ್ನು ಪಡೆದು ಉತ್ತೀರ್ಣತೆಯನ್ನು ಪಡೆಯಬೇಕಾಗುತ್ತದೆ.
14. ವಿದ್ಯಾರ್ಥಿಯು ವಿಶ್ವವಿದ್ಯಾಲಯವು ನಿಗದಿಪಡಿಸಿದ ಶುಲ್ಕಗಳನ್ನು ನೀಡಿ ಉತ್ತರಪತ್ರಿಕೆಯ ಜೆರಾಕ್ಸ್ ಪ್ರತಿಗಳನ್ನು ಪಡೆದು, ನಿಗದಿತ ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಬಹುದು. ಮರುಮೌಲ್ಯಮಾಪನದಲ್ಲಿ 6 ಕ್ಕಿಂತ ಹೆಚ್ಚು ಅಂಕಗಳು ಬಂದಲ್ಲಿ ಮಾತ್ರ ಹೆಚ್ಚಿನ ಅಂಕಗಳನ್ನು ಪರಿಗಣಿಸಲಾಗುವುದು. 20 ಕ್ಕಿಂತ ಹೆಚ್ಚು ಅಂತರವಿದ್ದಲ್ಲಿ ಮೂರನೇ ಮೌಲ್ಯಮಾಪನವನ್ನು ಮಾಡಿ ಆ ಅಂಕಗಳನ್ನು ಪರಿಗಣಿಸಲಾಗುತ್ತದೆ.

15. ವಿಶೇಷ ಸಂದರ್ಭದಲ್ಲಿ 5 ಅಂಕಗಳವರೆಗೆ ಒಂದು ಪತ್ರಿಕೆಗೆ ಸಾಮೂಹಿಕವಾಗಿ ಕೃಪಾಂಕಗಳನ್ನು ನೀಡುವ ಅಧಿಕಾರ ಕುಲಪತಿಗಳಿಗಿರುತ್ತದೆ. ಆದರೆ ಇದು ಕುಲಪತಿಗಳ ವಿವೇಚನೆಗೆ ಬಿಟ್ಟ ವಿಷಯ.
16. ವಿಶ್ವವಿದ್ಯಾಲಯದ ಸಂಬಂಧಿತ ಕಾಲೇಜುಗಳ ಪೈಕಿ ಒಂದರಲ್ಲಿ ಓದುತ್ತಿರುವ ವಿದ್ಯಾರ್ಥಿ ಯಾವುದೇ ಕಾರಣದಿಂದ ಇನ್ನೊಂದು ಕಾಲೇಜಿನಲ್ಲಿ ಪ್ರವೇಶ ಪಡೆಯಲು ಬಯಸಿದರೆ (ಆಯಾ ವಿಷಯಕ್ಕೆ ಅಧ್ಯಾಪನ ವ್ಯವಸ್ಥೆ ಇನ್ನೊಂದು ಕಾಲೇಜಿನಲ್ಲಿ ಇದ್ದರೆ ಮಾತ್ರ) ಇನ್ನೊಂದು ಕಾಲೇಜಿನಲ್ಲಿ ಪ್ರವೇಶವನ್ನು ಪಡೆಯಬಹುದು.
17 ಸ್ನಾತಕ ಹಾಗೂ ಸ್ನಾತಕೋತ್ತರ ತರಗತಿಗಳಲ್ಲಿ ಪೂರ್ಣಕಾಲಿಕ ಅಧ್ಯಯನ ನಿರತ ವಿದ್ಯಾರ್ಥಿಯು ಪ್ರಥಮ ವರ್ಷದ ಪರೀಕ್ಷೆಗಳಲ್ಲಿ ಉತ್ತೀರ್ಣವಾದ ನಂತರ ಯಾವುದೇ ಕಾರಣದಿಂದ ಬಾಹ್ಯವಿದ್ಯಾರ್ಥಿಯಾಗಿ ಪರೀಕ್ಷೆಯನ್ನು ಬರೆಯಲು ಅಪೇಕ್ಷಿಸಿದರೆ ಹಾಗೆ ಬಾಹ್ಯ ವಿದ್ಯಾರ್ಥಿಯಾಗಿ ಪರೀಕ್ಷೆಯನ್ನು ಬರೆಯಬಹುದು.
18. ಆದರೆ ಒಂದು ಬಾರಿ ಖಾಸಗಿ ವಿದ್ಯಾರ್ಥಿಯಾಗಿ ಪರೀಕ್ಷೆ ಬರೆದ ನಂತರ ಮತ್ತೆ ನಿಯಮಿತ/ಪೂರ್ಣಕಾಲಿಕ ವಿದ್ಯಾರ್ಥಿಯಾಗಿ ಪರೀಕ್ಷೆಯನ್ನು ಬರೆಯಲು ಅವಕಾಶವಿರುವುದಿಲ್ಲ.
19. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಂಬಂಧಿತ ಹಾಗೂ ಅಡಿಯಲ್ಲಿ ಬರುವ ಎಲ್ಲಾ ಕಾಲೇಜುಗಳು ಮತ್ತು ಪಾಠಶಾಲೆಗಳು ಅಥವಾ ಯಾವುದೇ ಇತರ ಸಂಸ್ಥೆಗಳಲ್ಲಿ ಪೂರ್ಣಕಾಲಿಕವಾಗಿ ಉದ್ಯೋಗದಲ್ಲಿ ಇರುವವರು ವಿಶ್ವವಿದ್ಯಾಲಯದ ಯಾವುದೇ ಕಾಲೇಜಿನಲ್ಲಿ ಪೂರ್ಣಕಾಲಿಕ ವಿದ್ಯಾರ್ಥಿಯಾಗಲು ಅವಕಾಶವಿರುವುದಿಲ್ಲ. ಅಂಥವರು ಖಾಸಗಿಯಾಗಿ ವಿಶ್ವವಿದ್ಯಾಲಯವು ನಡೆಸುವ ಪರೀಕ್ಷೆಗಳನ್ನು ತೆಗೆದುಕೊಳ್ಳುವುದು.
20. 2016–17ನೇ ಸಾಲಿನಿಂದ ಪದವಿ ತರಗತಿಗಳ ಪ್ರಮಾಣಪತ್ರದಲ್ಲಿ ಬಿ.ಎ (ಸಂಸ್ಕೃತ/ವೇದ) ಶಾಸ್ತ್ರೀ ಹಾಗೂ ಎಂ.ಎ (ಸಂಸ್ಕೃತ/ವೇದ) ಆಚಾರ್ಯ ಎಂದೂ ನಮೂದಾಗುತ್ತದೆ.

**ಬೋಧನಾ ಅವಧಿ ಇತ್ಯಾದಿ**

1. ಸ್ನಾತಕ ಮತ್ತು ಸ್ನಾತಕೋತ್ತರ ತರಗತಿಗಳಲ್ಲಿ ಪ್ರತಿ ಪತ್ರಿಕೆಗೆ ವಾರದಲ್ಲಿ ಒಂದು ಗಂಟೆಯ ಕನಿಷ್ಠ ಮೂರು ಅವಧಿಗಳ ಬೋಧನೆಯನ್ನು ನಡೆಸಬೇಕು.
2. ವರ್ಷದಲ್ಲಿ ಎರಡು ಬಾರಿ ಲಿಖಿತ ಹಾಗೂ ವಾಕ್‌ಪರೀಕ್ಷೆಗಳನ್ನು ನಡೆಸಿ, ಆಂತರಿಕ ಪರೀಕ್ಷೆ ಅಂಕಗಳನ್ನು ನೀಡಬೇಕು. ಈ ಸಂಬಂಧದ ದಾಖಲೆಗಳನ್ನು ಕಾಲೇಜಿನ ಪ್ರಾಂಶುಪಾಲರು ತಮ್ಮ ಬಳಿ ಇಟ್ಟುಕೊಂಡಿರಬೇಕು.
3. ಕನಿಷ್ಠ ಒಟ್ಟು 75 ಪ್ರತಿಶತ ಹಾಜರಿಯನ್ನು ವಿದ್ಯಾರ್ಥಿಯು ಪಡೆದಿರಬೇಕು. ಅನಿವಾರ್ಯ ಪಕ್ಷದಲ್ಲಿ 15 ಪ್ರತಿಶತ ಹಾಜರಾತಿಗೆ ವಿನಾಯಿತಿಯನ್ನು ವಿಶ್ವವಿದ್ಯಾಲಯದ ಅನುಮತಿಯೊಂದಿಗೆ ನೀಡಬಹುದಾಗಿದೆ.
4. ಸಂಸ್ಕೃತವೇ ಎಲ್ಲ ಶಾಸ್ತ್ರೀಯ ಪತ್ರಿಕೆಗಳ ಭಾಷಾಮಾಧ್ಯಮವಾಗಿರುತ್ತದೆ.
5. ಭಾಷಾ ಪತ್ರಿಕೆಗಳಲ್ಲಿ ಸಂಸ್ಕೃತ–ಇಂಗ್ಲೀಷ–ಕನ್ನಡ ಈ ಮೂರು ಭಾಷೆಗಳಲ್ಲಿ ಯಾವುದಾದರೂ ಎರಡು ಭಾಷೆಗಳನ್ನು ವಿದ್ಯಾರ್ಥಿಯು ಆಯ್ದುಕೊಳ್ಳಬಹುದಾಗಿರುತ್ತದೆ.
6. ಪ್ರತಿ ವಿಭಾಗದಲ್ಲಿ ಕನಿಷ್ಠ ಪಕ್ಷ 5 ವಿದ್ಯಾರ್ಥಿಗಳು ಅಧ್ಯಯನನಿರತರಾಗಿರಬೇಕು.
7. ಸ್ನಾತಕೋತ್ತರ ಅಧ್ಯಾಪನಕ್ಕೆ ನಿಯುಕ್ತರಾದ ಅಧ್ಯಾಪಕರು ನೆಟ್ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣತೆ / ಎಂ.ಫಿಲ್ ಅಥವಾ ಪಿ.ಎಚ್‌ಡಿ ತತ್ಸಮಾನ ಪದವಿಯನ್ನು ಪಡೆದಿರಬೇಕು.